(ಖಂಡ 2 ರಿಂದ 47ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :- ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ 2009 ವನ್ನು ತೆಗೆದುಕೊಳ್ಳೋಣ.

3. **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು**

ವಿಷಯ :- ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಅದಕ್ಕಿಂತಲೂ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಮತ್ತು ಸದನದ ಎಲ್ಲಾ ಸದಸ್ಯರ ಗಮನಕ್ಕೂ

ಕೂಡ ಈ ಮಾಹಿತಿಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ಸರ್ಕಾರ, ಉನ್ನತ ಶಿಕ್ಷಣ ಇಲಾಖೆ, ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನ ನೇತಾಜಿ ಸುಭಾಷಚಂದ್ರಬೋಸ್ ಜಯಂತಿ, ಹೀಗೆ ಅದರಲ್ಲಿ ಸ್ವಾಮಿ ವಿವೇಕಾನಂದರ ಫೋಟೋ ಹಾಗೂ ಸುಭಾಷಚಂದ್ರಬೋಸ್‌ರವರ ಫೋಟೋವನ್ನು ಹಾಕಿ ತಂದಿದ್ದಾರೆ. ಈ ಫೋಟೋಗಳನ್ನು ಹಾಕುವುದಕ್ಕೆ ಮತ್ತು ತೆಗೆಯುವುದಕ್ಕೆ ನಮ್ಮದು ಯಾವುದು ಅಭ್ಯಂತರವಿಲ್ಲ. ಈ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ದುಡಿದಿರುವಂತಹ ಜಾಗೃತಿಯನ್ನು ಮೂಡಿಸಿದಂತಹ ಮಹಾನ್ ನಾಯಕರ ಬಗ್ಗೆ ಎರಡನೇ ಮಾತಿಲ್ಲ. ಈ ವಿದ್ಯಾರ್ಥಿ ಸಂಕಲ್ಪ ಸಮಾವೇಶಗಳನ್ನು ಇವರು ಯಾವ ಕಾನೂನಿನಡಿಯಲ್ಲಿ ಮಾಡುತ್ತಿದ್ದಾರೆ. ಇದರ ಒಳಗೆ ಇರುವಂತಹವರು ಯಾರು? ಇದನ್ನು ಯಾವ ರೀತಿಯಾಗಿ constitute ಮಾಡುತ್ತಾರೆ? ಯಾವ ಅಡಿಯಲ್ಲಿ ಹಣವನ್ನು ಖರ್ಚು ಮಾಡುತ್ತಾರೆ? ಇವತ್ತಿನ ದಿವಸ ಇದರಲ್ಲಿರತಕ್ಕಂತಹ ಆದರದ ಸ್ವಾಗತವನ್ನು ಕೋರುವವರು ಬಿ.ಹೆಚ್.ಮಂಜುನಾಥ್, ಶ್ರೀ ಎಸ್.ಪಿ. ಮುನಿವೆಂಕಟರೆಡ್ಡಿ, ರಾಜ್ಯ ವಿಭಾಗಾಧಿಕಾರಿ, ಸದಸ್ಯರು ಎಂದು ಇದೆ. ಇವರುಗಳನ್ನು ಯಾವ ರೀತಿಯಾಗಿ nominate ಮಾಡುತ್ತೀರಿ? ಏತಕ್ಕಾಗಿ ಇದನ್ನು ಮಾಡುವಂತಹದ್ದು ಆಯಿತು? ಇದಕ್ಕೆ ಹೇಳುವವರು ಕೇಳುವವರು ಯಾರು ಇಲ್ಲವೇ? ಯಾರ್‍ಯಾರು ಏನೇನು ಪ್ರಚಾರವನ್ನು ಮಾಡಬೇಕಾಗಿದೆ, ಅದನ್ನು ಪ್ರಚಾರವನ್ನು ಮಾಡಿಕೊಂಡು ಹೋಗುವುದು. ನಮ್ಮೆಲ್ಲರನ್ನು ಸೇರಿಸಿದ್ದಾರೆ. ನಿಮ್ಮ ಹೆಸರನ್ನು ಹಾಕಿಕೊಂಡಿದ್ದೇವೆ, ನೀವು ಬರುತ್ತೀರಾ ಎಂದು ನಮ್ಮ ಹತ್ತಿರ ಬಂದು ಕೇಳಿದ್ದಾರಾ? ಎಲ್ಲಿ ನಮ್ಮಗಳ ಹೆಸರುಗಳನ್ನು ಹಾಕಬೇಕು, ಎಲ್ಲಿ protocol follow ಮಾಡಬೇಕು ಅದನ್ನು ಮಾಡುವುದಿಲ್ಲ. ಆದರೆ ಎಲ್ಲಿ ಅನಾವಶ್ಯಕವಾಗಿದೆಯೋ, ಇದರ ಬಗ್ಗೆ ಯಾರಿಗೂ ಕೂಡ ಗೊತ್ತಿರುವುದಿಲ್ಲವೋ ಅಲ್ಲಿ ಹಾಕುತ್ತಾರೆ. ಯಾವ ಕಾನೂನಿನ ಅಡಿಯಲ್ಲಿ ಮಾಡಿದ್ದಾರೋ, ಅಥವಾ ಯಾವುದಾದರೂ ಹೊಸ ಕಾನೂನನ್ನು ತಂದು ordinance issue ಮಾಡಿದ್ದಾರೋ ಅದು ನನಗೆ ಗೊತ್ತಿಲ್ಲ. ಆದರೆ ಇವತ್ತಿನ ದಿವಸ ಎಲ್ಲಾ ಕಡೆಯಲ್ಲಿ, ಈ ಬಗ್ಗೆ ನಾನು ಹೇಳಬೇಕಾಗುತ್ತದೆ. ತಮ್ಮ ಪ್ರಚಾರಕೋಸ್ಕರ ಸರ್ಕಾರದ ಯಂತ್ರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದರ ತಮ್ಮ ಸಂಘಸಂಸ್ಥೆಗಳನ್ನು ಪಕ್ಷದ ಕಾರ್ಯಕರ್ತರನ್ನು ಆರ್‌ಎಸ್‌ಎಸ್ ಜನರನ್ನು ಇದರಲ್ಲಿ ಒಳಗೂಡಿಸಿಕೊಂಡು ತಮ್ಮ ತತ್ವಗಳನ್ನು ಬೇರೂರಿಸತಕ್ಕಂತಹ ದೃಷ್ಟಿಯಿಂದ ಇದು ಒಂದು ವ್ಯವಸ್ಥಿತವಾದಂತಹ ವರ್ಣಾಶ್ರಮ ಪದ್ಧತಿಯನ್ನು ತರತಕ್ಕಂತಹ ವ್ಯವಸ್ಥೆ ಇಲ್ಲಿ

ನಡೆದಿದೆ. ಇದನ್ನು ಏಕೆ ಮಾಡಿದರು? ಇದನ್ನು ಯಾರು ಮಾಡಿದರು? ನಮಗೆ ಯಾರು ಬಂದು invitationನ್ನು ಕೊಟ್ಟಿದ್ದಾರಾ? ಏತಕ್ಕೊಸ್ಕರವಾಗಿ ಮಾಡುತ್ತಿದ್ದೇವೆಂದು ಹೇಳಿದ್ದಾರಾ? ಮನಸ್ಸು ಬಂದಹಾಗೆ invitation ನ್ನು print ಮಾಡುವುದು. ಅದನ್ನು ಹಂಚುವುದು ಮತ್ತು ಹೇಳುವುದು. ಇದು ಅಲ್ಲಿಯ ಶಾಸಕರಿಗೂ ಸಹ ಗೊತ್ತಿರುವುದಿಲ್ಲ. ಅವರ ಅಧ್ಯಕ್ಷತೆ ಎಂದು ಹೇಳುವುದು, ನಮ್ಮನ್ನು ಮುಖ್ಯ ಅತಿಥಿಗಳು ಎಂದು ಹೇಳುವುದು, ಇದರ ಅರ್ಥವೇನು? ಅಧ್ಯಕ್ಷರೆ ಈ ರೀತಿಯಾಗಿ ನಡೆದರೆ, ನನಗನಿಸುತ್ತದೆ, ಇದು ಉದ್ದೇಶಪೂರ್ವಕವಾಗಿ ಈ ರೀತಿಯಾಗಿ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ ಎನ್ನುವಂತಹ ಮಾತನ್ನು ನಾನು ಹೇಳಲೇಬೇಕಾಗುತ್ತದೆ ಮತ್ತು ಅದನ್ನು ನಾನು ಖಂಡಿಸಬೇಕಾಗುತ್ತದೆ. ಭಯೋತ್ಪಾದನೆ ವಿರೋಧಿ ಚಟುವಟಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳನ್ನು ಜಾಗೃತಿಯನ್ನು ಮಾಡಬೇಕಾದರೆ ಎಲ್ಲಾ ಪಕ್ಷದ ಮುಖಂಡರನ್ನು ಕರೆಸಿ, ಅಲ್ಲಿ NGOs ಇದ್ದಾರೆ. ಅಲ್ಲಿ ಬೇರೆಯವರು ಸಹ ಇದ್ದಾರೆ. ನಾವು ಇಲ್ಲಿ ಕಮಿಟಿಯನ್ನು ಮಾಡ ಬೇಕಾಗುತ್ತದೆ. ಈ ಬಗ್ಗೆ ಎಂಎಲ್‌ಎಗಳ ಸಲಹೆಗಳನ್ನು ಕೇಳಿದ್ದೀರಾ? ಅವರವರ ಕ್ಷೇತ್ರದಲ್ಲಿ ಕಾರ್ಯಕ್ರಮಗಳು ನಡೆಯುವಾಗ ಅವರನ್ನು ಕರೆದು ಈ ರೀತಿ ಇದೆ ಈ ಉದ್ದೇಶಕ್ಕಾಗಿ ನಾವು ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿಗಳು ಕೇಳಿದ್ದಾರ? Education Minister ಕೇಳಿದ್ದಾರಾ? ಅದಕ್ಕೆ ಈ ಒಂದು ಹೆಸರಿನಲ್ಲಿ ಇವತ್ತಿನ ದಿವಸ ತಮ್ಮ ಪಕ್ಷದ ಬೆಳವಣಿಗೆಗೋಸ್ಕರ ಅಥವಾ RSS philosophyಯನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡಿಸುವ ದೃಷ್ಟಿಯಿಂದ ಈ ಕೆಲಸವು ನಡೆದಿದೆ. ಅದಕ್ಕಾಗಿ ತಾವು ತಕ್ಷಣ ಇಂತಹ ಕಾರ್ಯಕ್ರಮಗಳನ್ನು ತಡೆಹಿಡಿಯಬೇಕು. ಇದು ಯಾವ ಕಾನೂನಿನ ಅಡಿಯಲ್ಲಿ ನಡೆದಿದೆ? ಇದನ್ನು ಯಾರು ಮಾಡುತ್ತಿದ್ದಾರೆ? ಯಾವ Headನಲ್ಲಿ ಹಣ ಖರ್ಚಾಗುತ್ತಿದೆ? ಇದರ ಬಗ್ಗೆ ಯಾರ್ಯಾರನ್ನು consult ಮಾಡಿ ಮಾಡುತ್ತಿದ್ದಾರೆ ಅನ್ನತಕ್ಕಂತಹದ್ದನ್ನು ಸ್ಪಷ್ಟವಾದಂತಹ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿ ವಿದ್ಯಾರ್ಥಿಗಳ ಜಾಗೃತಿ ಅಭಿಯಾನವನ್ನು ನಾವು ಕೈಗೊಂಡಿದ್ದೇವೆ, ಅದರಲ್ಲೂ ವಿಶೇಷವಾಗಿ ಮುಂಬೈ ಘಟನೆಯ ನಂತರ ಸಾರ್ವಜನಿಕವಾಗಿ ಜಾಗೃತಿಯನ್ನುಂಟುಮಾಡಬೇಕೆಂದು ಈ ಕಾರ್ಯಕ್ರಮವು

ನಡೆಯುತ್ತಿದೆ, ಅದರ ಬಗ್ಗೆ ಮತ್ತು ಅದು ನಡೆಯುತ್ತಿರುವ ರೀತಿಯ ಬಗ್ಗೆ ತಮ್ಮ ಆಕ್ಷೇಪಣೆಯನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ. ನಾಳೆ ಬೆಳಗಾವಿಯಲ್ಲಿ ಈ ಕಾರ್ಯಕ್ರಮವು ಆಗುತ್ತಿದೆ. ನಾಳೆ ದಿನ ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ಜಯಂತಿಯು ನಡೆಯುತ್ತಿದೆ. ಇಡೀ ರಾಜ್ಯದಲ್ಲಿ ಸ್ವಾಮಿ ವಿವೇಕಾನಂದ ಜಯಂತಿಯಿಂದ ಹಿಡಿದು ನೇತಾಜಿ ಸುಭಾಷಚಂದ್ರ ಬೋಸ್‌ರವರ ಜಯಂತಿಯು ಜನವರಿ 12 ರಿಂದ 23ರವರೆಗೂ ಈ ಒಂದು ಅಭಿಯಾನವನ್ನು ಕೈಗೊಳ್ಳಬೇಕು. ಏಕೆಂದರೆ ಇವತ್ತು campusಗಳಲ್ಲಿ Infosys ನವರು ಹೋಗಿ Campus selection ಮಾಡುವುದನ್ನು ನಾವು ನೋಡಿದ್ದೇವೆ. Campusನಲ್ಲಿ WIPRO ದವರು ಮಾಡುತ್ತಿರುವುದನ್ನು ಸಹಾ ನಾವು ನೋಡಿದ್ದೇವೆ. ಅದೇ ರೀತಿಯಾಗಿ campusನಲ್ಲಿ ಭಯೋತ್ಪಾದನೆಯ recruitment ಸಹ ಆಗುತ್ತಿರುವ ಬಗ್ಗೆ ನಾವು ಪೇಪರ್‌ನಲ್ಲಿ ನೋಡಿದ್ದೇವೆ. ಅದು ದಾವಣಗೆರೆ, ಬಿಜಾಪುರ, ಹಾಗೂ ಹುಬ್ಬಳ್ಳಿ ಇರಬಹುದು. ಈ ದೃಷ್ಟಿಯಿಂದ ..... ನಾನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದನ್ನು ಯಾವ ಕಾನೂನಿನ ಅಡಿಯಲ್ಲಿ ನೀವು ಮಾಡುತ್ತಿದ್ದೀರಿ? ಇದು ಯಾವ ಯೋಜನೆ? ಅದು ಯಾವ scheme? ಅದು ಗೊತ್ತಿರಬೇಕಲ್ಲಾ?

ಶ್ರೀ ಎಸ್. ಸುರೇಶ್ ಕುಮಾರ್:- ದೇಶಪ್ರೇಮವನ್ನು ಕಲಿಸುವುದಕ್ಕೂ ಕೂಡ ಒಂದು ಕಾನೂನು ಬೇಕಾ?

ಶ್ರೀ ಆರ್. ರೋಷನ್ ಬೇಗ್ :- NCCಯನ್ನು compulsory ಮಾಡಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ :- ದೇಶ ಪ್ರೇಮಕ್ಕೂ ಕಾನೂನು ಬೇಕಾ ರೋಷನ್ ಬೇಗ್?

ಶ್ರೀ ಆರ್. ರೋಷನ್ ಬೇಗ್ :- NCCಯನ್ನು compulsory ಮಾಡುವುದಕ್ಕೆ ತಮಗೆ ಅಧಿಕಾರವಿದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ದೇಶಪ್ರೇಮದ ಬಗ್ಗೆ ಎಲ್ಲರಿಗೂ ಕೂಡ ಗೌರವವಿದೆ. ಏಕೆಂದರೆ ಸರ್ಕಾರ ನಡೆಸುವಂತಹ ಕಾರ್ಯಕ್ರಮಗಳು ಯಾವುದಾದರೂ– ಒಂದು ಯೋಜನೆ ಅಡಿಯಲ್ಲಿ ಇರುತ್ತದೆ. ನೀವು ದೇಶಪ್ರೇಮ ತಂದು, emotional issue ತಂದು ನಮಗೆ ಇಕ್ಕಟ್ಟು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್ :- ಭಯೋತ್ಪಾದನ ಜಾಗೃತಿ ಕಾರ್ಯಕ್ರಮವು ಒಂದು emotional issue ಆಗುತ್ತದಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- Yes.

ಶ್ರೀ ಎಸ್. ಸುರೇಶ್ ಕುಮಾರ್ :- I am very sorry. ಈ ರೀತಿಯಾಗಿರುವುದರಿಂದಲೇ ಭಯೋತ್ಪಾದನೆಗೆ ಕುಮ್ಮಕ್ಕು ಕೊಡುತ್ತಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ಸ್ವಲ್ಪ ಕೇಳಿ ನಾನು ಹೇಳುತ್ತೇನೆ. ಈಗ ದೇಶಪ್ರೇಮದ ಹೆಸರಿನಲ್ಲಿ....

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಒಟ್ಟಾಗಿ ಮಾತನಾಡುವುದಕ್ಕೆ ಹೋಗಬೇಡಿ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ನಂತರ ತಾವುಗಳು ಮಾತನಾಡಿ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :- ನಾಳೆ ಕಾರ್ಯಕ್ರಮದ ಬಗ್ಗೆ ನಿಮಗೆ ಯಾವ ಕಾನೂನಿನ ಅಡಿಯಲ್ಲಿ ಬರುತ್ತದೆ ಎಂಬುದನ್ನು ಬಿಟ್ಟು ಈ ಬಗ್ಗೆ ಬೇರೆ ಏನು ನಿಮ್ಮ ಆಕ್ಷೇಪಣೆ ಇದೆಯೇ? ನಾಳೆ ಬಂದು ಆ ಯುವಕರಿಗೆ inspire ಮಾಡುತ್ತಿರುವುದು ಬ್ರಿಗೇಡಿಯರ್, ಮರಾಠ ಲೈಟ್ ಇನ್‌ಫೆಂಟ್ರಿ, ಬೆಳಗಾವಿ. ಅವರು ಒಬ್ಬ ಮಿಲಿಟರಿ ಮ್ಯಾನ್, ಆರ್ಮಿ ಮ್ಯಾನ್ ಆಗಿದ್ದಾರೆ. ಮತ್ತೊಬ್ಬರು ಬಿಜಾಪುರದ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ನಿರ್ಭಯಾನಂದರು. ಇಲ್ಲಿ ಒಂದು ತಪ್ಪಾಗುತ್ತಿದೆ. ನೀವು ಯಾರ್‍ಯಾರನ್ನೋ RSS ಎಂದು ಹೇಳುತ್ತಿದ್ದೀರಿ. ಇದು ಬಹಳ ಸಂತೋಷ. ಸ್ವಾಮಿ ವಿವೇಕಾನಂದರು ಕೂಡ RSS ನವರು. ನೀವೇ ಹೇಳಿದ್ದೀರಿ. ಅವರು ಇಡೀ ಜಗತ್ತಿನ ಆಸ್ತಿ. ಅವರ ಹೆಸರಿನಲ್ಲಿ ನಾವು ಮಾಡುತ್ತಿದ್ದೇವೆ. ಯುವಕರಿಗೆ ಒಂದು ಜಾಗೃತಿಯನ್ನು ಮೂಡಿಸುವಂತಹ ಕಾರ್ಯಕ್ರಮಕ್ಕೆ ನೀವು ಕಾನೂನನ್ನು ಕೇಳುವುದು ಪ್ರಾಯಶಃ ನಾನು ಮಾನ್ಯ ಖರ್ಗೆಯವರಿಂದ ಇದನ್ನು ಅಪೇಕ್ಷೆ ಮಾಡಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇಲ್ಲಿ ನಾವು ಕೇಳಿದ್ದೇ ಬೇರೆ. ಅವರು ಹೇಳುವುದು ಬೇರೆಯಾಗಿದೆ. ಅಂದರೆ ಅವರೊಬ್ಬರೆ ದೇಶಪ್ರೇಮಿಗಳು, ಬೇರಯವರ್ಯಾರೂ ದೇಶಪ್ರೇಮಿಗಳಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :- ಇದರ ಅಧ್ಯಕ್ಷತೆ ಯಾರು ಸ್ವಾಮಿ? ಇದನ್ನು ನಡೆಸಿಕೊಡುವವರು?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರು contract ತೆಗೆದುಕೊಂಡಿದ್ದಾರ? ಯಾವುದಕ್ಕೂ ಕೂಡ ಪದ್ಧತಿ ಇದೆ. ಯಾವುದಕ್ಕೂ ಕೂಡ ನಾವು rulesನಲ್ಲಿ ಮಾಡುತ್ತೇವೆ. ಇದು ಸರ್ಕಾರ, ಸರ್ಕಾರ ಕಾನೂನಿನ ಪ್ರಕಾರ ನಡೆಯುತ್ತದೆಯೇ ಹೊರತಾಗಿ, emotional ಆಗಿ ಇದು private business ಅಲ್ಲ ಇದು.

ಶ್ರೀ ಎಸ್. ಸುರೇಶ್ ಕುಮಾರ್ :- ದೇಶಪ್ರೇಮ ಎಂಬುದು ಕಾನೂನುಬಾಹಿರ ಚಟುವಟಿಕೆಯಲ್ಲ. ಅದನ್ನು ತಾವು ಕಾನೂನುಬಾಹಿರ ಅಂದರೆ ಜನವರಿ 26th parade ಮಾಡುವಹಾಗಿಲ್ಲ. August 15th ಮಾಡುವ ಹಾಗಿಲ್ಲ. ಗಾಂಧಿಜಯಂತಿಯನ್ನು ಸಹ ನಾವು ಮಾಡುವ ಹಾಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವೆಲ್ಲವೂ ರಾಷ್ಟ್ರದ ಕಾರ್ಯಕ್ರಮಗಳು. ನೀವು ಇವುಗಳನ್ನು ಯಾವ ರೀತಿಯಾಗಿ, ಎಲ್ಲಿ ಈ ಬಗ್ಗೆ ಸಭೆಯನ್ನು ಕರೆದು ಯಾರನ್ನು consult ಮಾಡಿ, ಯಾವ Government Order ಕೆಳಗಡೆ, ಯಾವ Headನಲ್ಲಿ ಇವತ್ತು ನೀವು ಹಣವನ್ನು ಖರ್ಚು ಮಾಡುತ್ತಿದ್ದೀರಿ.' ಈ ಕಾರ್ಯಕ್ರಮವನ್ನು ತಾವು ಒಂದೇ ಕಡೆ ಮಾಡಿರುವುದಿಲ್ಲ. ಇಡೀ ರಾಜ್ಯದಲ್ಲಿ ಈ ಕಾರ್ಯಕ್ರಮಗಳು ನಡೆದಿದೆ. ನಾನು ಇದು ಒಂದೆ ಕಡೆ ಆಗಿತ್ತು ಎಂದರೆ ಇದು ದೇಶಕ್ಕಾಗಿ ನಡೆಯುತ್ತಿದೆ ಅಂತ ಹೇಳಿ ನಾವು ಹೇಳಿಕೊಳ್ಳಬಹುದಾಗಿತ್ತು. ನಿಮ್ಮದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ನಡೆದಿದೆ.

ಪ್ರತಿಯೊಂದು ಜಿಲ್ಲೆಯಲ್ಲಿ ನಡೆದಿದೆ, ಪ್ರತಿಯೊಂದು ಕಾಲೇಜುಗಳಲ್ಲಿ ನಡೆದಿದೆ. ಅದು ಹೇಗೆ ನಡೆದಿದೆ? ಅದಕ್ಕೆ ದುಡ್ಡು ಎಲ್ಲಿಂದ ಬರುತ್ತದೆ? ಯಾವ ಹೆಡ್‌ನಲ್ಲಿ ಕೊಡುತ್ತೀರಿ? ಏಕೆಂದರೆ ಪ್ರತಿಯೊಂದು ಪೈಸೆಗೂ ನಾವು ಇಲ್ಲಿ ಓಟನ್ನು ಹಾಕುತ್ತೇವೆ.

ಪ್ರತಿಯೊಂದು ಜಾಹೀರಾತು ಬರುತ್ತವೆ. ಹೇಗೆ ಬರುತ್ತವೆ? ಅದೆಲ್ಲವನ್ನೂ ಬಿಟ್ಟು ನಾವು ಮಾತನಾಡಬೇಕೆಂದರೆ ನೀವು ದೇಶದ ವಿರುದ್ಧ ಮಾತನಾಡುತ್ತಿದ್ದೀರಿ ಅಂದರೆ ಏನರ್ಥ? ಅಂದರೆ ಏನು ನೀವು ಖರ್ಚು ಮಾಡುವುದರ ವಿಧಿ ವಿಧಾನಗಳನ್ನು ಕೇಳಬಾರದೇ? ಅಥವಾ ನೀವು ಯಾವ ಪದ್ಧತಿಯಲ್ಲಿ ಈ ಕಮಿಟಿಯನ್ನು constitute ಮಾಡಿದ್ದೀರಿ ? ಹೆಸರನ್ನು ಹಾಕಬೇಕಾದರೆ ನಮ್ಮನ್ನು ಕೇಳಿದಿರಾ? Invitation ಏನಿದೆ ಎಂಬುದರ ಬಗ್ಗೆ ನಿಮಗೇ ಗೊತ್ತಿಲ್ಲ. ಈಗ ನೀವು ನೋಡಿಕೊಂಡು ಈಗ ಹೇಳುತ್ತಿದ್ದೀರಿ. ಅಥವಾ ಇಲ್ಲಿರುವ 224 ಜನ ಸದಸ್ಯರಿಗೆ ಇಲ್ಲಿ ಸೆಷನ್ ನಡೆದಿದೆ ಎಂದು ಯಾರಾದರೂ ಬಂದು ಹೇಳಿದರೇ? See, ತಾವು emotional ಆಗಿ ಜನರಿಗೆ ಪ್ರಚೋದನೆ ಮಾಡುವಂಥ ಮಾತುಗಳನ್ನು ಈ ಸದನದ ಮೂಲಕ ಹೇಳಬೇಡಿ. ನಾನು ನೇರವಾಗಿ ಕೇಳುತ್ತಿದ್ದೇನೆ, ಏಕೆಂದರೆ, ಇದರ ಹಿನ್ನೆಲೆ ಏನಿದೆ? ಯಾರು ಇದನ್ನು ಮಾಡುತ್ತಿದ್ದಾರೆ? ಇದಕ್ಕೆ ಕಾರಣಕರ್ತರು ಯಾರು?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರೇ, ಇದರ ಹಿನ್ನೆಲೆ ಬಹಳ ಸ್ಪಷ್ಟವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ :- ದೇಶ ಪ್ರೇಮವನ್ನು ನೀವೇನೋ ಗುತ್ತಿಗೆಗೆ ತೆಗೆದುಕೊಂಡಿರುವಂತೆ ಕಾಣುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ನೀವೂ ಗುತ್ತಿಗೆಗೆ ತೆಗೆದುಕೊಂಡಿಲ್ಲ. ಪ್ರಾಯಶಃ ನಾವೂ, ನೀವೂ, ಈ ದೇಶದ ಪ್ರತಿಯೊಬ್ಬ ಪ್ರಜೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ದೇಶ ಪ್ರೇಮದ ಬಗ್ಗೆ ಈ ಕಡೆ ಕುಳಿತಿರುವವರು ಯಾರೂ ಕೂಡ ನಿಮ್ಮಿಂದ ಕಲಿಯಬೇಕಾಗಿಲ್ಲ. ನಾವು ಬಂದಿರತಕ್ಕ ಪಕ್ಷಗಳು...

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಪ್ರಾಯಶಃ ನಾವೆಲ್ಲಾ ಕಲಿಯಬೇಕಾದ ಅವಶ್ಯಕತೆ ಬಂದಿದೆ.

ಶ್ರೀ ಟಿ.ಬಿ. ಜಯಚಂದ್ರ :- ದೇಶಕ್ಕೆ ಸ್ವಾತಂತ್ರ್ಯ ಬರಬೇಕಾದಾಗ ಈ ರೀತಿ ಗುತ್ತಿಗೆಗೆ ತೆಗೆದುಕೊಳ್ಳುವವರು ಯಾರು ಆಗ ಇರಲಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ:- ನೀವೂ ಇರಲಿಲ್ಲ, ನೀವೂ ಇರಲಿಲ್ಲ. ಆಗ ಕಾಂಗ್ರೆಸ್ (ಇಂಡಿಯಾ) ಪಕ್ಷವಿತ್ತು. ನಿಮ್ಮದು ಕಾಂಗ್ರೆಸ್(ಐ). ಆಗ ನೀವೂ ಇರಲಿಲ್ಲ, ಆ ಕಾಂಗ್ರೆಸ್ಸೇ ಬೇರೆ, ಈ ಕಾಂಗ್ರೆಸ್ಸೇ ಬೇರೆ. ನೀವೆಲ್ಲಿದ್ದಿರಿ? ನೀವಿದ್ದಿರಾ?

ಅಧ್ಯಕ್ಷರು :- ಯಾರೂ ಪರಸ್ಪರ ಮಾತನಾಡಬೇಡಿ. ದಯವಿಟ್ಟು ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ :- ಈ ಸೂಚನೆಯನ್ನು ತರಬೇಕಾದರೆ ಒಂದು ಮಾಹಿತಿಯನ್ನು ನಾನು ಸರ್ಕಾರದ ಮುಂದೆ ಇಟ್ಟೆ. ನಾನು ಆಗಲೇ ಹೇಳಿದ್ದೆ. ಯಡಿಯೂರಪ್ಪನವರೇ ತಾವು ಬಹಳ ಬುದ್ಧಿವಂತರು. ಅವರ ಪಕ್ಷವನ್ನು ಯಾವರೀತಿಯಾಗಿ ಬೆಳೆಸಬೇಕು, ಯಾವರೀತಿಯಾಗಿ ಯುವಜನರ ಮನಸ್ಸನ್ನು pollute ಮಾಡಬೇಕು ಎನ್ನುವುದನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀರಿ. ಏನೆಂದರೆ ಇದೊಂದು ಕಾರ್ಯಕ್ರಮ. ಕಾಲೇಜುಗಳಲ್ಲಿ, ಹೈಸ್ಕೂಲುಗಳಲ್ಲಿ, ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಸಬ್ ಡಿವಿಷನ್‌ನಲ್ಲಿ ನಡೆಯಲಿರುವ ಕಾರ್ಯಕ್ರಮ, ಇಂತಿಂಥ ದಿವಸ ಇಂತಿಂಥ ಕಾರ್ಯಕ್ರಮವನ್ನು ಮಾಡಬೇಕು ಎಂದು ಅದಕ್ಕೊಂದು ಅಜೆಂಡಾ ರೀತಿಯಲ್ಲಿ ಚಾರ್ಟ್ ಹಾಕಿ, ಒಂದೊಂದು ಕಾರ್ಯಕ್ರಮಕ್ಕೂ ಎರಡು, ಮೂರು ಸಾವಿರ ಜನರು ಬರುತ್ತಾರೆ, ಅವರೇನು ಸ್ವೇಚ್ಛೆಯಾಗಿ ಬರುತ್ತಾರೋ? ಸರ್ಕಾರದಿಂದ ಹಣ ಖರ್ಚು ಮಾಡುತ್ತೀರೋ? ...

(ಗೊಂದಲ)

ಶ್ರೀ ವಿರೂಪಾಕ್ಷಪ್ಪ :- ಅದರಿಂದ ನಿಮಗೇನು ತೊಂದರೆ?

ಶ್ರೀ ಟಿ.ಬಿ. ಜಯಚಂದ್ರ :- 5 ಕೋಟಿ ರೂ.ಗಳು ಆಗಬೇಕೆಂದರೆ ನಿಮ್ಮ ಸಚಿವ ಸಂಪುಟದಲ್ಲಿ ಅದಕ್ಕೆ ಒಪ್ಪಿಗೆ ಆಗಬೇಕಲ್ಲವೇ? ಸಚಿವ ಸಂಪುಟದಲ್ಲಿ ಚರ್ಚೆಯಾಯಿತೇ? ಏನಾಯಿತು? ನಮಗೆ ಅದರ ಆದೇಶ ಕೊಡಿ ಎಂದು ಕೇಳುತ್ತಿದ್ದೇವೆ. ನೀವು ಆದೇಶದ ಬಗ್ಗೆ ಹೇಳುತ್ತಿಲ್ಲ. ಕೇವಲ ಕರಡು, ನಿಮ್ಮ ಪ್ಲಾನ್ ಅನ್ನು ಎಲ್ಲಾ ಕಡೆ ಪ್ರಚಾರ ಮಾಡುತ್ತಿದ್ದಾರೆ. ನೀವೇ ಸಮಿತಿಯ ಅಧ್ಯಕ್ಷರು ಎಂದು. ಎಲ್ಲಾ

ಕಾಲೇಜುಗಳ ಪ್ರಾಂಶುಪಾಲರು ಫೋನ್ ಮಾಡಿ ಕೇಳುತ್ತಿದ್ದಾರೆ. ನಾವು ಯಾವ ಸಮಿತಿಯ ಅಧ್ಯಕ್ಷರೆಂದು ಕಾಲೇಜುಗಳ ಪ್ರಾಂಶುಪಾಲರಿಂದ ಕಲಿಯಬೇಕಾಗಿದೆ. ನಾವೊಬ್ಬ ಜವಾಬ್ದಾರಿಯುತ ಶಾಸಕರಾಗಿ, ಸರ್ಕಾರ ಇದ್ದು, ಸರ್ಕಾರದಿಂದ ನಮಗೆ ಮಾಹಿತಿ ಬರಲಿಲ್ಲ. ಒಬ್ಬ ಕಾಲೇಜು ಮೇಷ್ಟರಿಂದ ನಾವು ತಿಳಿದುಕೊಳ್ಳಬೇಕಾಯಿತು. ಈ ರಾಜ್ಯದಲ್ಲಿ ಏನು ನಡೆಯುತ್ತಿದೆ?

ಶ್ರೀ ಸಿದ್ದು ಸವದಿ :- ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಸದಸ್ಯರು ತಮ್ಮ ನಾಯಕರ ಹೆಸರಿನಲ್ಲೇ ಎಲ್ಲಾ ಯೋಜನೆಗಳನ್ನು ಮಾಡಿದ್ದಾರೆ. ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆ, ಇಂದಿರಾ ಆವಾಸ್ ಯೋಜನೆ. ಇಂಥ ದೊಡ್ಡ ದೊಡ್ಡ ನಾಯಕರ ಹೆಸರಿಟ್ಟುಕೊಂಡು ಯೋಜನೆಗಳನ್ನು ಮಾಡಿದ್ದಾರೆ. ಈಗ ನಾವು ರಾಷ್ಟ್ರ ನಾಯಕರ ಹೆಸರಿನಲ್ಲಿ ಮಾಡುತ್ತಿರುವುದು ಅವರಿಗೆ ತೊಂದರೆಯಾಗಿದೆ. ಅದರ ಬಗ್ಗೆ ಅವರು ಹೇಳಬೇಕಲ್ಲವೇ? ಅವರು ತಂದಿರತಕ್ಕ ಯೋಜನೆಗಳೆಲ್ಲಾ ಅವರ ನಾಯಕರ ಹೆಸರಿನಲ್ಲೇ ಇವೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :- ಈಗ ಯಾವ ಹೆಡ್‌ನಲ್ಲಿದೆ ಎಂದು ನೀವು ಕೇಳುತ್ತಿರುವುದು. ಈಗ ನನ್ನದೊಂದು ಪ್ರಶ್ನೆ. ಈಗ ಗುಲಬರ್ಗಾ ನಗರದ ಹೊರ ವಲಯದಲ್ಲಿ ನಿರ್ಮಿಸಲಾದ ಬುದ್ಧ ವಿಹಾರ ಉದ್ಘಾಟನಾ ಸಮಾರಂಭಕ್ಕೆ ಕೈಗೊಳ್ಳಬೇಕಾದ ಪೂರ್ವಭಾವಿ ಸಿದ್ಧತೆಗಳು, ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾದ ಅನುದಾನದ ವಿವರ- ಒಟ್ಟು ಸರ್ಕಾರ ಏಳು ಕೋಟಿ ರೂ.ಗಳನ್ನು ಕೊಟ್ಟಿದೆ. ಅದರಲ್ಲಿ ದಿನಾಂಕ 7.1.2009, 19.01.2009 ರಂದು ಜರುಗುವ ಸಮಾರಂಭಕ್ಕೆ 200 ತಾತ್ಕಾಲಿಕ ಷೆಡ್ ಮತ್ತು ಶೌಚಾಲಯಗಳನ್ನು ನಿರ್ಮಿಸುವುದಕ್ಕೆ ಷೆಡ್ ಹಾಕುವುದು. ಇದು ಯಾವ ಹೆಡ್‌ನಲ್ಲಿ ಕೊಟ್ಟರು ಸ್ವಾಮಿ? ಯಾವ ಹೆಡ್‌ನಲ್ಲಿ ಕೊಟ್ಟರು? ಇದನ್ನು ಕೊಡುವಾಗ ಪರ್ಮಿಷನ್ ಕೇಳಿದ್ದರೇ ಹೇಳಿ, ಪರ್ಮಿಷನ್ ಕೇಳಿದ್ದರೆ ಹೇಳಿ.

(ಗೊಂದಲ)

SRI MALLIKARJUNA KHARGE :- You take it back I say. Don't threaten me. ನೀವು ಕೊಟ್ಟಿದ್ದೀರಿ ಎಂದು ಹೇಳಿ ನನಗೆ ಹೆದರಿಸಬೇಡಿ. ಬೇಕಾದರೆ ಕಿತ್ತುಕೊಂಡು ಹೋಗ್ರಿ. ಹೆದರಿಸಬೇಡಿ,

ಒಡೆದು ಹಾಕಿಸಿ ಕೊಡ್ರಿ. Don't threaten me. ಕಿತ್ತುಕೊಂಡು ಹೋಗ್ರಪ್ಪಾ.

ಶ್ರೀ ಎಸ್. ಸುರೇಶ್ ಕುಮಾರ್:- ಅದು ದೇಶಭಕ್ತಿ. No, No. I am just....

SRI MALLIKARJUNA KHARGE :- Don't threaten me by saying this. Do you want to threaten me for giving water, road, electricity ?

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯೊಳಗೆ ಪ್ರವೇಶಿಸಿದರು)

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ನೀವು ನಿಮ್ಮ ಸ್ಥಳಕ್ಕೆ ಹೋಗಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ್ ಖರ್ಗೆ :- ಏನೆಂದು ತಿಳಿದುಕೊಂಡಿದ್ದೀರಿ?

(ಗೊಂದಲ)

ಶ್ರೀ ಸಿ.ಟಿ. ರವಿ:- ಏಕಿಷ್ಟು ವ್ಯಗ್ರರಾಗುತ್ತಿದ್ದೀರಿ? ಇಷ್ಟೊಂದು ಸಿಟ್ಟು ನಿಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ದೇಶಭಕ್ತಿಗಾಗಿ ಹಣ ಖರ್ಚು ಮಾಡಿದರೆ ಏಕೆ ಇಷ್ಟು ಸಂಕಟ ಪಡುತ್ತೀರಿ? ಅಬ್ಬಾ, ಅಬ್ಬಾ, ಏಕೆ ಇಷ್ಟೊಂದು ಸಿಟ್ಟು? ಏಕೆ ಇಷ್ಟೊಂದು ಸಿಟ್ಟಾಗುತ್ತಿದ್ದೀರಿ? ಸದನದ ಬಾವಿಯೊಳಗೆ ಪ್ರವೇಶಿಸುವುದನ್ನು ಬಿಟ್ಟರೆ ಬೇರೆ ಕೆಲಸವೇ ನಿಮಗಿಲ್ಲವೇ? ಇಷ್ಟೊಂದು ಸಿಟ್ಟು ಏಕೆ? ಈ ಸಿಟ್ಟಿಗೆ ಏನು ಕಾರಣ? ಇಷ್ಟೊಂದು ಸಿಟ್ಟು ಏಕೆ?

ಅಧ್ಯಕ್ಷರು :- ದಯವಿಟ್ಟು ನೀವು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿ.ಟಿ. ರವಿ :- ಅಧ್ಯಕ್ಷರೇ, ದೇಶಭಕ್ತಿಗೆ ಹಣ ಖರ್ಚು ಮಾಡಿದರೆ, ಭಯೋತ್ಪಾದನೆ ವಿರುದ್ಧ ಜನಜಾಗೃತಿ ಮಾಡಲಿಕ್ಕೆ ಹಣ ಖರ್ಚು ಮಾಡಿದರೆ, ಯಾವ ಹೆಡ್‌ನಲ್ಲಿ ಖರ್ಚು ಮಾಡಿದ್ದೀರಿ? ಏನು ಕಾನೂನು ತಂದಿದ್ದೀರಿ ಎಂದು ಪ್ರಶ್ನೆ ಮಾಡುತ್ತಾರಲ್ಲಾ? ..

SRI MALLIKARJUNA KHARGE :- We don't want your mercy. ನನ್ನ ಮನೆಗೆ ತಂದು ಕೊಟ್ಟ ಹಾಗೆ ಮಾತನಾಡುತ್ತೀರಲ್ಲಾ? You are insulting me.

(ಗೊಂದಲ)

ಶ್ರೀ ಸಿ.ಟಿ. ರವಿ :- ಸಿಟ್ಟು ಮಾಡಿ ಎಲ್ಲರ ಬಾಯಿ ಮುಚ್ಚಿಸಬಹುದು ಎಂದುಕೊಂಡಿದ್ದಾರೆ.

ಅಧ್ಯಕ್ಷರು :- ದಯವಿಟ್ಟು ಶಾಸಕರು ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಸಿ.ಸಿ. ಪಾಟೀಲ್ :- ವಿರೋಧ ಪಕ್ಷದ ನಾಯಕರು ಸ್ವಾಮಿ ವಿವೇಕಾನಂದರಿಗೆ ಅವಮಾನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ :- ಅಧ್ಯಕ್ಷರೇ, ಅವರಿಗೆ ದು:ಖವಾಗಿರುವುದು . . .

(ಗೊಂದಲ)

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ನಾನು ಅತ್ಯಂತ ವಿನಯದಿಂದ ಪ್ರತಿ ಪಕ್ಷದ ನಾಯಕರಲ್ಲಿ ಒಂದು ವಿನಂತಿಯನ್ನು ಮಾಡಲಿಚ್ಛಿಸುತ್ತೇನೆ. ಇವತ್ತು ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನ, ಸ್ವಾಮಿ ವಿವೇಕಾನಂದರ ಜಯಂತಿಯಿಂದ ಪ್ರಾರಂಭವಾಗಿ ಇವತ್ತು ಸುಭಾಷ್‌ಚಂದ್ರ ಬೋಸ್ ಜಯಂತಿಯ ಹಿನ್ನೆಲೆಯಲ್ಲಿ ನಾಳೆ ಬೆಳಗಾವಿಯಲ್ಲಿ ಐದಾರು ಸಾವಿರ ಜನ ಯುವಕ, ಯುವತಿಯರು ಕಾರ್ಯಕ್ರಮಲ್ಲಿ ಭಾಗವಹಿಸುತ್ತಿದ್ದಾರೆ. ಅದಕ್ಕೆ ನಮ್ಮ ಬ್ರಿಗೇಡಿಯರ್ ಸಂಜೀವ್ ವಲ್ಯ, ಮರಾಠ ಲೈಟ್ ಇನ್‌ಫೆಂಟ್ರಿ, ಬೆಳಗಾವಿ ಇವರು ಭಾಗವಹಿಸುತ್ತಿದ್ದಾರೆ. ಅಧ್ಯಕ್ಷತೆಯನ್ನು ಬೆಳಗಾವಿ (ಉತ್ತರ) ಮತಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಫಿರೋಜ್ ಸೇಠ್‌ರವರು ವಹಿಸುತ್ತಿದ್ದಾರೆ, ನಾನು ಭಾಗವಹಿಸುತ್ತಿದ್ದೇನೆ.

ಉಳಿದ ಎಲ್ಲ ಮುಖಂಡರು ಭಾಗವಹಿಸುತ್ತಿದ್ದಾರೆ. ಇಲ್ಲಿ ನಿಮ್ಮ objection ಏನೆಂದರೆ ಯಾವ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೀರಿ ಎಂದು. ನಮ್ಮ ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಂಡಿದೆ. ಭಯೋತ್ಪಾದನೆ ವಿರುದ್ಧ ಈ ನಾಡಿನಲ್ಲಿರುವ ಯುವಕ ಯುವತಿಯರಿಗೆ ಜಾಗೃತಿ ಮೂಡಿಸಬೇಕು. ದೇಶಕ್ಕಾಗಿ ಸರ್ವ ತ್ಯಾಗಕ್ಕೆ ನಾವು ಸಿದ್ಧರಿದ್ದೇವೆ ಅನ್ನುವ ಭಾವನೆಯನ್ನು ಮೂಡಿಸಬೇಕು. ಯಾರೋ ಖಾಕಿ ಬಟ್ಟೆಯನ್ನು ಹಾಕಿರುವಂಥ ಕೆಲವೇ ಪೊಲೀಸ್ ಅಧಿಕಾರಿಗಳ ಕರ್ತವ್ಯಪಲ್ಲ ಇದು, ಯೂನಿವರ್ಸಿಟಿಯಲ್ಲಿ ಭಯೋತ್ಪಾದಕರು ನುಸುಳುಕೊಳ್ಳುತಿದ್ದಾರೆ. ಇಡೀ ಜಗತ್ತು ಈ ಭಯೋತ್ಪಾದಕರಿಂದ ಆತಂಕಗೊಂಡು ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗುತ್ತಿದೆ. ಆತಂಕದ ವಾತಾವರಣ ಮೂಡುತ್ತಿದೆ. ಭಾರತ ಜಗತ್ತಿನಲ್ಲಿ ಮುಂಚೂಣಿಯಲ್ಲಿ ಬೆಳೆಯುತ್ತಿದೆ, ಆರ್ಥಿಕವಾಗಿ ಸಬಲವಾಗುತ್ತಿದೆ. ಬೆಂಗಳೂರಿನಲ್ಲಿ ಚಂದ್ರಯಾನವನ್ನು ಯಶಸ್ವಿ ಮಾಡಿದ್ದೇವೆ. ಭಾರತ ಎಂದರೆ 21ನೇ ಶತಮಾನದಲ್ಲಿ ಭಾರತೀಯರ ಶತಮಾನ ಎಂದು ಆಗುತ್ತಿದೆ. ಇಡೀ ಜಗತ್ತು ಭಾರತದಲ್ಲಿರುವ ನಮ್ಮ ಧರ್ಮ, ಸಂಸ್ಕೃತಿ, ಪರಂಪರೆ, ಇತಿಹಾಸ, ನಮ್ಮ ಕುಟುಂಬದ ವ್ಯವಸ್ಥೆಯನ್ನು ನೋಡುತ್ತಿದೆ. ಇಂಥ ಒಂದು ಸಂದರ್ಭದಲ್ಲಿ ಹೇಗಾದರೂ ಮಾಡಿ ಹಿನ್ನಡೆಯನ್ನು ಉಂಟು ಮಾಡಬೇಕೆಂದು ಭಯೋತ್ಪಾದಕರ ಒಂದು ತಾಂಡವ ನೃತ್ಯ ನಡೆಯುತ್ತಿದೆ. ಕೇಂದ್ರಸರ್ಕಾರ ನೇರವಾಗಿ ನಿಮ್ಮ ಬೆಂಗಳೂರು next targetನಲ್ಲಿದೆ ಎಚ್ಚರವಾಗಿರಿ ಎಂದು ನಮಗೆ ಕೇಂದ್ರದ ಗೃಹ ಸಚಿವರು ಮಾಹಿತಿಗಳನ್ನು ಕೊಡುತ್ತಿದ್ದಾರೆ, ಇವೆಲ್ಲದರ ಹಿನ್ನೆಲೆಯಲ್ಲಿ ಇಡೀ ರಾಜ್ಯದಲ್ಲಿ ಯುವಕ ಯುವತಿಯರನ್ನು ಜಾಗೃತಿ ಮಾಡುವುದಕ್ಕೋಸ್ಕರ ಚುನಾಯಿತ ಶಾಸಕರು ಅನೇಕ ಜನ ಹಿರಿಯರನ್ನು ಕರೆದು ಕಾರ್ಯಕ್ರಮ ಮಾಡುತ್ತಿದ್ದೇವೆ, ಇದು ಮೊದಲನೆಯದು. ಇದುವರೆಗೆ ಆದಂಥ ಕಾರ್ಯಕ್ರಮದಲ್ಲಿ ಎಲ್ಲಾದರೂ ಒಂದು ಕಡೆ ನಾವು ರಾಜಕೀಯವನ್ನು ಬೆಳೆಸಿದ್ದೇವೆಂದು, ಅಲ್ಲಿ ಪಕ್ಷದ ಚಟುವಟಿಕೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆಂದು, ಅಲ್ಲಿ ಇನ್ನೇನಾದರೂ ಪಿತೂರಿ ಮಾಡುವಂಥ ಕೆಲಸ ಮಾಡಿದ್ದೇವೆಂದು, ಇದರ ಬಗ್ಗೆ ಏನಾದರೂ ಒಂದು ಉದಾಹರಣೆ ಇದುವರೆಗೆ ನಡೆದ ಕಾರ್ಯಕ್ರಮದಲ್ಲಿ ಏನಾದರೂ ಮಾಹಿತಿ ಇದ್ದರೆ ಅದನ್ನು ಹೇಳಿದರೆ ನಿಮಗೆ ನಾವು ಮಾಹಿತಿಯನ್ನು ಕೊಡಲಿಕ್ಕೆ ನಾವು ಸಿದ್ದರಿದ್ದೇವೆ. ಇವತ್ತು ನಮ್ಮ ಸರ್ಕಾರ ನಾವು ನಿರ್ಧಾರ ಮಾಡಿದ್ದೇವೆ.

ಕೇಂದ್ರ ಸರ್ಕಾರ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಸರ್ಕಾರದ ಕಡೆಯಿಂದ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನ ಮಾಡುತ್ತಿದ್ದೇವೆ. ಇದು ನಮ್ಮ ತೀರ್ಮಾನ, ಸರ್ಕಾರದ ತೀರ್ಮಾನ. ಇದು ಸರಿಯಲ್ಲ ಯಡಿಯೂರಪ್ಪನವರೆ ಎಂದರೆ ಹಾಗೂ ಮಾಹಿತಿಗಳನ್ನು ಕೇಳಿದರೆ, ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎಂದೂ ಸಹ ನಮಗೆ ಸಮಾಧಾನ ಹೇಳುವಂಥ ಹಿರಿಯ ವ್ಯಕ್ತಿ. ನಿಮ್ಮ ಬಗ್ಗೆ ನಮಗೆ ಗೌರವವಿದೆ. ಏಕೆಂದರೆ, ಇಷ್ಟು ವರ್ಷಗಳ ಸುದೀರ್ಘ ರಾಜಕೀಯ ಅನುಭವ ಇರುವಂಥವರು. ದಲೈ ಲಾಮಾನಂಥವರು ಹಿರಿಯರು ಬಂದಿದ್ದರು, ನೀವು ಕಾರ್ಯಕ್ರಮವನ್ನು ಮಾಡಿದ್ದೀರಿ. ನಾವು ಯಾರೂ ವಿರೋಧ ಮಾಡಲಿಲ್ಲ. ಇದರ ಬಗ್ಗೆ ನಾವು ಏನು ಹೇಳುವುದಿಲ್ಲ. In fact, ಅಂದಿನ ಅಧಿವೇಶನದಲ್ಲಿ ನಾನು ಮಾನ್ಯ ಸಭಾಧ್ಯಕ್ಷರ ಮುಂದೆ ಹೇಳಿದೆ. ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಇರಲಿಲ್ಲ, ಸಭಾ ನಾಯಕರು ಇರಲಿಲ್ಲವೆಂದು, ಆವತ್ತೇ ನಿಲುವಳಿ ಸೂಚನೆಯನ್ನು ತಂದಿದ್ದೀರಿ ಎಂದು ನಾನು ತಳಮಳದಿಂದ ಕೂತಿದ್ದೇನೇ ಹೊರತು, ಬೇರೆ ಏನು ಇಲ್ಲ. ರಾಷ್ಟ್ರಪತಿಗಳು ಬಂದಾಗ ನಾನು ಹಾಗೂ ಮಾನ್ಯ ಖರ್ಗೆಯವರು ಎಲ್ಲರೂ ಒಟ್ಟಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆವು. ಆದರೆ, ನಾವು ಹೇಳುತ್ತಿರುವುದು ಏನೆಂದರೆ, ನಾವೆಲ್ಲಾ ನಿಮ್ಮ ಜೊತೆಗಿದ್ದೇವೆ. ದಲೈ ಲಾಮಾರವರ ವಿಚಾರಗಳಿಗೆ ಇಡೀ ಜಗತ್ತು ಮನ್ನಣೆ ಕೊಡುತ್ತಿರುವಂಥ ಒಬ್ಬ ಹಿರಿಯ ವ್ಯಕ್ತಿ ಅವರು, ಅವರ ಬಗ್ಗೆ ನಮಗೆ ಸಂಪೂರ್ಣ ಗೌರವ ಇದೆ. ಅದರ ಬಗ್ಗೆ ನಮ್ಮದು ಎರಡು ಮಾತಿಲ್ಲ. ಏನಾದರೂ ತಪ್ಪು ಅಭಿಪ್ರಾಯ ಇದೆಯೇ ಎಂದು ಬೇಕಾದರೆ ಕಡತ ತೆಗೆಸಿ ನೋಡಿ. ಇನ್ನು ಒಂದೆರಡು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಇಲ್ಲಿ ಏನಾಗಿದೆಯೆಂದರೆ, ನಾವು ಬಿ.ಜೆ.ಪಿ.ಯವರು ಅಧಿಕಾರಕ್ಕೆ ಬಂದಾಗಿನಿಂದ, ಈ ನಾಡಿನ ಜನರ ಆಶೀರ್ವಾದದಿಂದ ನಾವಿಲ್ಲಿ ಕುಳಿತಿದ್ದೇವೆ. ನಿಮಗೆ ಸೈರಣೆ ಇಲ್ಲದೇ ಇರಬಹುದು. ಇವತ್ತೇ ಅಲ್ಲ, from day one, ನೀವೆಲ್ಲರೂ ನಮ್ಮನ್ನು ವಿರೋಧ ಮಾಡಿಕೊಂಡು ಬರುತ್ತಿದ್ದೀರಿ. ಯಾವುದಕ್ಕೂ ನೀವು co-operate ಮಾಡುತ್ತಿಲ್ಲ. ರಸಗೊಬ್ಬರದ ಬಗ್ಗೆ ಡೆಲ್ಲಿಗೆ ಹೋಗಿ ಬಂದಿರುವ delegation ನಿಂದ ಹಿಡಿದು ಯಾವುದಕ್ಕೂ ನೀವು ಸಹಕಾರ ಕೊಡುತ್ತಿಲ್ಲ. ಏನು ಬೇಡ. ಇವತ್ತು ವಿಧಾನ ಸೌಧದ ಶಂಕುಸ್ಥಾಪನೆ ಬಗ್ಗೆ ನೀವು ಹೇಳುತ್ತೀರಿ, ಮಾನ್ಯ ಕುಮಾರಸ್ವಾಮಿಯವರ ಹೆಸರು ಇಲ್ಲ ಎಂದು ಹೇಳುತ್ತೀರಿ. ಸ್ವಾಮಿ, ಈ ದೇಶದಲ್ಲಿ, ರಾಜ್ಯದ ಇತಿಹಾಸದಲ್ಲಿ, ನೀವು ಅಧಿಕಾರದಲ್ಲಿದ್ದಾಗ,

ಯಾವತ್ತಾದರೂ ಮಾಜಿ ಮುಖ್ಯಮಂತ್ರಿಗಳ ಹೆಸರನ್ನು ಆ ಒಂದು ಲಿಸ್ಟ್‌ನಲ್ಲಿ ಅಥವಾ ಕೆತ್ತನೆ ಮಾಡಿ ಹಾಕುತ್ತಾರೆಯೇ? ಎಲ್ಲಾದರೂ ಮಾಡಿದ್ದರೆ ನೀವು ಉದಾಹರಣೆ ಕೊಡುತ್ತೀರಾ? ಈ ರೀತಿಯ ಕಾರ್ಯಕ್ರಮಗಳಲ್ಲಿ ಏನಾದರೂ ಕಾರಣವನ್ನು ಹುಡುಕಿ ತಪ್ಪು ಹುಡುಕಿ. . . . . .

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಆ ವಿಷಯ ಚರ್ಚೆ ಮಾಡಬೇಕು ಎಂದರೆ, ಒಂದು ಸಾರಿ ಅಡಿಗಲ್ಲನ್ನು ಇಟ್ಟು . . . . . .

(ಗೊಂದಲ)

ಡಾ॥ ಬಿ.ಎಸ್. ಯಡಿಯೂರಪ್ಪ :- ಭಯೋತ್ಪಾದನೆ ವಿರುದ್ಧ ಯಾವುದೇ ರೀತಿಯಾಗಿ, ಸಾರ್ವಜನಿಕರನ್ನು involve ಮಾಡಿಕೊಳ್ಳಬಾರದು ಎಂಬುದು ನಮ್ಮ ಉದ್ದೇಶ.

(ಗೊಂದಲ)

ನಾವು ಒಂದು ಕಾರ್ಯಕ್ರಮ ನಿಯೋಜನೆ ಮಾಡಿದ್ದೇವೆ. ನಾಳೆ ಕಾರ್ಯಕ್ರಮಕ್ಕೆ ಬನ್ನಿ. ಅಲ್ಲೇನಾದರೂ ನಮ್ಮ ಪಕ್ಷದ ಚಟುವಟಿಕೆ ಮಾಡಿದರೆ, ಇಲ್ಲೇನಾದರೂ ನಮ್ಮ ಅಜೆಂಡಾ ಇದೆ ಎಂದು ನಿಮಗನಿಸಿದರೆ, ಆಗ ನೀವು ಹೇಳಿ ನಾನು ತಲೆಬಾಗುತ್ತೇನೆ. ಜಾಗೃತಿ ಮೂಡಿಸುವುದು, ದೇಶ ಭಕ್ತಿ ಮೂಡಿಸುವುದು ಈಗ ನಮಗೆ top priority. ರಾಜಕಾರಣ ಆಮೇಲೆ ಮಾಡೋಣ. ಮೊದಲು ದೇಶ ಉಳಿಸೋಣ. ಈ ಒಂದು ಹಿನ್ನೆಲೆಯಲ್ಲಿ ಯುವಕರನ್ನು involve ಮಾಡುವಂಥ ಪ್ರಯತ್ನ ಮಾಡಿದರೆ, ನಿಮಗೆ ಏಕೆ ಬೇಸರವಾಗುತ್ತದೆ. ನಿಮ್ಮಂಥ ಹಿರಿಯರು ಏಕೆ ಬೇಜಾರು ಮಾಡಿಕೊಳ್ಳುತ್ತೀರಿ? ಇದರಲ್ಲಿ ಏನು ಅಪರಾಧವನ್ನು ನೀವು ಹುಡುಕುತ್ತೀರಿ? ನಾನು ಹೇಳುವುದೇನೆಂದರೆ, ನಿಮಗೆ ಇಷ್ಟವಿಲ್ಲದಿದ್ದರೆ, ಬರಬೇಡಿ. ನಮಗೆ ಸರಿಕಂಡಂಥ ಜನ ಆಶೀರ್ವಾದ ಮಾಡಿದ್ದಾರೆ. ಸರ್ಕಾರ ನಮ್ಮದೇ ಆದ ರೀತಿಯಲ್ಲಿ ದೇಶದಲ್ಲಿ ಜಾಗೃತಿ ಉಂಟು ಮಾಡುವುದಕ್ಕೆ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ, ಭಯೋತ್ಪಾದನೆ ಹುಟ್ಟು ಅಡಗಿಸುವುದಕ್ಕೆ ನಾವು ಕಾರ್ಯಕ್ರಮ ರೂಪಿಸಿದ್ದೇವೆ. ಅದಕ್ಕೆ ನಿಮ್ಮ ವಿರೋಧವಾಯಿತು ಎಂದರೆ, ನಾವೇನು ಮಾಡುವುದಕ್ಕೆ ಆಗುತ್ತದೆ? ಅದು ನಿಮ್ಮ ಅಜೆಂಡಾ. ದೇಶ ಉಳಿಸುವುದು ನಮ್ಮ ಅಜೆಂಡಾ.

ಬಯೋತ್ಪಾದನೆಗೆ ರಕ್ಷಣೆ ಕೊಡುವಂಥದ್ದು ನಿಮ್ಮ ಅಜೆಂಡಾ ಆದರೆ ದೇಶ ಉಳಿಸುವುದು ನಮ್ಮ ಅಜೆಂಡಾ.

(ಗೊಂದಲ)

ಅಪರೂಪಕ್ಕೆ ಇಂತಹ ಒಂದು ಸದನ ಸೇರಿ, ಉತ್ತರ ಕರ್ನಾಟಕದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಈ ಚರ್ಚೆಗೆ ಅವಕಾಶ ಕೊಡದೇ, ಸತ್ಯಾಗ್ರಹ ಮಾಡಿ ಇದರಲ್ಲೇ ಕಾರ್ಯಕ್ರಮ ಮುಗಿಯಬೇಕೆಂದು ನಿಮ್ಮ ಅಪೇಕ್ಷೆ ಇದ್ದರೆ, ನಾನೇನು ಅಡ್ಡಿಮಾಡುವುದಿಲ್ಲ. ನೀವೇ ಹೇಳಿ ಯಾವ ಸಂದರ್ಭದಲ್ಲಿ ಸಹಕಾರ ಕೊಟ್ಟಿಲ್ಲ ಎಂದು, ಒಂದು ಉದಾಹರಣೆ ಕೊಡಿ. ನೀವು ಸಹಕರಿಸಬೇಕು. ತಪ್ಪು ಗ್ರಹಿಕೆಯಾಗಿದ್ದರೆ ನಿಮ್ಮ ಹತ್ತಿರ ಬಂದು ಮಾತನಾಡುತ್ತೇವೆ. ನಮಗೆ ಯಾವುದೇ ದುರುದ್ದೇಶವಿಲ್ಲ. ನೀವು ನಾಳೆ ಕಾರ್ಯಕ್ರಮಕ್ಕೆ ಬನ್ನಿ. ಒಂದೊಂದು ಕಾರ್ಯಕ್ರಮದಲ್ಲಿ ಸುಮಾರು 5,000 ಯುವಕ, ಯುವತಿಯರು ಬರುತ್ತಿದ್ದಾರೆ, ಎಲ್ಲಾ ಸ್ವಾಮೀಜಿಯವರು ಬರುತ್ತಿದ್ದಾರೆ. ಇಂತಹ ಅದ್ಭೂರಿ ಕಾರ್ಯಕ್ರಮವನ್ನು ಇಡೀ ದೇಶದಲ್ಲಿ, ಇದಾದ ಮೇಲೆ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಅಲ್ಲಿ ಎಲ್ಲಾ ಶಾಸಕರನ್ನು involve ಮಾಡುತ್ತಿದ್ದೇವೆ. ನಿಮ್ಮ ವಿಚಾರವನ್ನು ಹೇಳಿ ನಾವು ಬೇಡ ಎಂದು ಹೇಳುವುದಿಲ್ಲ. ಹೀಗಿರಬೇಕಾದರೆ, ನಿಮಗೆ ಏಕೆ ಬೇಸರವಾಗುತ್ತದೆ? ಏಕೆ ಆಕ್ರೋಶಕ್ಕೆ ಒಳಗಾಗುತ್ತಿದ್ದೀರಿ? ನಾವು ಮಾಡುತ್ತಿರುವ ಒಳ್ಳೆಯ ಕೆಲಸಗಳನ್ನು ನೋಡಿ, ನಿಮಗೆ ಸೈರಣೆ ಇಲ್ಲದೇ ಹೀಗೆ ಮಾಡುತ್ತಿದ್ದೀರ? ಎಲ್ಲಿ ಜಾಗೃತಿ ಉಂಟಾಗುತ್ತದೆ ಎನ್ನುವ ಭಯದಿಂದ ಹೀಗೆ ಮಾಡುತ್ತಿದ್ದೀರೊ ಗೊತ್ತಿಲ್ಲ. ಯುವಕ, ಯುವತಿಯರು ಈ ವಿಚಾರದಲ್ಲಿ ಬದ್ಧರಾಗಿ ಇಲ್ಲಿಂದ ಮತ್ತೆ ವಾಪಸ್ಸು ಹೋಗುತ್ತಾರೆ ಎನ್ನುವ ಭಯವೋ, ಏನೋ ಗೊತ್ತಿಲ್ಲ. ಏನು ಕಾರಣ ಎಂದು ನನಗೆ ಗೊತ್ತಿಲ್ಲ. ದಯಮಾಡಿ ಬೇರೆ ಯಾವುದೂ ತಮ್ಮ agenda ಇಲ್ಲ. ಇದರಲ್ಲಿ ಇರುವುದೇನೆಂದರೆ, ಜನರಲ್ಲಿ ಹಾಗೂ ಯವಕ, ಯುವತಿಯರಲ್ಲಿ ದೇಶ ಭಕ್ತಿಯನ್ನು ಮೂಡಿಸುವುದು ಮಾಡುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ನಿಮ್ಮದೇನಾದರೂ specific ಆಗಿ, ಏನಾದರೂ ಕಾರಣಗಳಿದ್ದರೆ, ನಾವು ತಲೆ ಬಾಗಿ ಸರಿಪಡಿಸಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಏನಾದರೂ ಸಲಹೆ ಇದ್ದರೆ ಕೊಡಿ ನಾವು ಮಾರ್ಪಾಟು ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು :- ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ದಯವಿಟ್ಟು ಸದಸ್ಯರು ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನೀವು ಆಮೇಲೆ ಮಾತನಾಡಿ. ಎರಡು ನಿಮಿಷ ಬಿಟ್ಟು ಮಾತನಾಡಿ.

ಡಾ॥ ಬಿ.ಎಸ್.ಯಡಿಯೂರಪ್ಪ :- ಬನ್ನಿ please ಭಯೋತ್ಪಾದನೆ ವಿರುದ್ಧ ಯುವಕರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಉದ್ದೇಶ. ಇದನ್ನು ವಿರೋಧ ಮಾಡಿದರು ಎನ್ನುವ message ಹೋದರೆ ಕಷ್ಟ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, Invitation ನಮಗೆ ಬಂದ ಮೇಲೆ, ಅದು ಏನೆಂದರೆ, ನಮ್ಮ ಸ್ಥಳೀಯ ಶಾಸಕರಾದ ಫಿರೋಜ್ ಸೇಠ್‌ರವರು invitation ಅನ್ನು ತಂದು ಕೊಟ್ಟರು. ಆಗ ನನಗೆ ಈ ಕಾರ್ಯಕ್ರಮ ಇದೆಯೆಂದು ತಿಳಿಯಿತು. ಈ ಕಾರ್ಯಕ್ರಮ ಇದೆ ಎಂದು ಯಾರಾದರೂ ಹೇಳಬೇಕಾಗಿತ್ತು. ಆದರೆ, ಹೇಳಲಿಲ್ಲ. ಇಂತಹ ಉದ್ದೇಶ ಇದೆ ಎಂದು ಹೇಳಬೇಕಾಗಿತ್ತು. ಅದೂ ಇಲ್ಲ. ನೀವು ಮನಸ್ಸಿಗೆ ಬಂದ ಹಾಗೆ print ಮಾಡಿ ಹಂಚಿ, ನಮಗೆ ಬನ್ನಿ ಎಂದು ಹೇಳುವುದು. ಕಾರ್ಯಕ್ರಮಕ್ಕೆ ಬರಲಿಲ್ಲವೆಂದರೆ, ನೀವು ದೇಶದ್ರೋಹಿಗಳು, ನಾವು ದೇಶ ಪ್ರೇಮಿಗಳು ಎಂದು ಹೇಳುವುದು. ಆಮೇಲೆ ನೀವು ಅದನ್ನು ಯಾವ ಹೆಡ್‌ನಲ್ಲಿ ಮಾಡುತ್ತೀರಿ ಎಂದು ಕೇಳಿದರೆ, ಆ ಹೆಡ್ ತೋರಿಸುವುದನ್ನು ಬಿಟ್ಟು, ಬುದ್ಧ ವಿಹಾರ ಕಾರ್ಯಕ್ರಮ ನಡೆದಿದ್ದು, ಅದಕ್ಕೆ ರಸ್ತೆಗೆ ಇಷ್ಟು ಹಣವನ್ನು ಕೊಟ್ಟಿದ್ದೇವೆ, ವಿದ್ಯುತ್ತಿಗೆ ಇಷ್ಟು ಕೊಟ್ಟಿದ್ದೇವೆ, ನೀರಿಗೆ ಇಷ್ಟು ಕೊಟ್ಟಿದ್ದೇವೆ ಎಂದು ಹೇಳುವುದು. ಅದು ಯಾವುದರಲ್ಲಿ ಮಾಡಿದ್ದೀರಿ ಎಂದು ಕೇಳಿದರೆ, ಇದು ಪ್ರಚೋದನೆ ಎನ್ನಬೇಕೇ? ಏನು ಅನ್ನಬೇಕು ಹೇಳಿ? ನಿಮಗೆ ಅಷ್ಟು ಅಸೂಯೆ ಇದ್ದರೆ, ಅದು ಸರಿಯಿಲ್ಲವೆಂದು ಕಂಡರೆ ಅಲ್ಲಿನ ಕಂಬಗಳನ್ನು ಕಿತ್ತುಕೊಂಡು ಬನ್ನಿ. ಏಕೆಂದರೆ, ಆ ಗ ಂಡಿ ಕಟ್ಟುವುದಕ್ಕೆ ಕೊಟ್ಟಿರುವುದು ನಿಮ್ಮದು ನಯಾ ಪೈಸಾ ಇಲ್ಲ. ರಸ್ತೆಗೆ, ವಿದ್ಯುತ್ತಿಗೆ, ಕುಡಿಯುವ ನೀರಿಗೆ, daisಗೆ ಹಣವನ್ನು ಕೊಟ್ಟಿದ್ದೀರಿ. ಹೊರಗಡೆ ಇರತಕ್ಕಂಥದ್ದಕ್ಕೆ ಹಣವನ್ನು ಕೊಟ್ಟಿದ್ದೀರಿ. ತಾವು ದಯವಿಟ್ಟು ಅಷ್ಟು ಉಪಕಾರ ಮಾಡಿದರೆ ಆ ಕಾರ್ಯಕ್ರಮ ಯಶಸ್ವಿಯಾಗುತ್ತದೆ. ದಯವಿಟ್ಟು ನೀವು ಈ ಸೌಲಭ್ಯಗಳನ್ನು ಕೊಟ್ಟಿದ್ದೇ ದೊಡ್ಡ ಉಪಕಾರ ಎಂದರೆ ದಯವಿಟ್ಟು ಆ ಕಂಬಗಳನ್ನು ಕಿತ್ತುಕೊಂಡು ಬನ್ನಿ.

ಶ್ರೀ ಎಸ್. ಸುರೇಶ್ ಕುಮಾರ್ :- ಈ ಮಾತನ್ನು ಯಾರು ಹೇಳಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನೆ, ಎಲ್ಲಾದರೂ ಭಿಕ್ಷೆ ಬೇಡಿ ತಂದು ಆ ಸೌಲಭ್ಯಗಳನ್ನು ಕಲ್ಪಿಸುತ್ತೇನೆ. ಈ ರೀತಿಯಾಗಿ ನೀವು ಓದಿ ಹೆದರಿಸಬೇಕಾದರೆ, ನಾನು ಹೆದರುವುದಿಲ್ಲ.

ಡಾ॥ ಬಿ.ಎಸ್. ಯಡಿಯೂರಪ್ಪ :- ಖಂಡಿತ ಇಲ್ಲ. ನಾನು ನಿಮ್ಮನ್ನು ರಾಷ್ಟ್ರಪತಿಗಳ ಜೊತೆ ಆ ಕಾರ್ಯಕ್ರಮದಲ್ಲಿ ನೋಡಿದಾಗ, ಜೀವನದಲ್ಲಿ ಒಬ್ಬ ರಾಜಕಾರಣಿಯಾದಂಥ ವ್ಯಕ್ತಿ, ಯಾವ ರೀತಿಯಾದ ಸಾರ್ಥಕವಾದ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಹೋಗಿ ನೋಡಿಕೊಂಡು ಬನ್ನಿ ಎಂದು ನಮ್ಮ ಶಾಸಕರಿಗೆ ಹೇಳಿದ್ದೇನೆ. ಅದ್ಭುತವಾದ ಕೆಲಸವನ್ನು ತಾವು ಮಾಡಿದ್ದೀರಿ. ಸ್ವಾಗತ ಮಾಡಿದ್ದೇವೆ. ಅದು ಸರ್ಕಾರದ ಕರ್ತವ್ಯ, ನನ್ನ duty ಅದು. ಉಪಕಾರ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಲ್ಲ ನೀವು ಉಪಕಾರ ಎಂದು ಹೇಳಿದ್ದೀರಿ. ಅವರು ಕ್ಷಮೆ ಕೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ :- ನನ್ನ ಮಾತಿನಿಂದ ತಮಗೆ ಆ ಒಂದು ತಪ್ಪು ಗ್ರಹಿಕೆ ಆಗಿದ್ದರೆ ನಾನು ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ನಾನು ನಿಮ್ಮನ್ನು ಬುದ್ಧ ವಿಹಾರ ಮಾಡುವಾಗ brochure ನೋಡಿ ಮೆಚ್ಚಿಕೊಂಡು ನಿಮ್ಮ ಹತ್ತಿರ ಮಾತನಾಡಿದ್ದೇನೆ. ಬುದ್ಧವಿಹಾರದ ಬಗ್ಗೆ ಪುಸ್ತಕ ಕೊಡಿ ಎಂದು ಕೇಳಿದ್ದೇನೆ. ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಿ, ಅಪಾರ್ಥ ಮಾಡಿಕೊಳ್ಳಬೇಡಿ. ನನಗೆ ನಿಮ್ಮ ಮೇಲೆ ಗೌರವವಿದೆ. You are a leader. ನಾನು ಹೇಳಿದ್ದು ಒಂದು, ಅದನ್ನು mention ಮಾಡಬೇಡಿ.

(ಈ ಹಂತದಲ್ಲಿ ಧರಣಿಯಲ್ಲಿದ್ದ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.)

ಶ್ರೀ ಯು.ಟಿ. ಖಾದರ್ :- ಭಂಯೋತ್ಪಾದನೆ ಜನಜಾಗೃತಿ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೇಳಿದ್ದಾರೆ, ಮಂಗಳೂರಿನಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದ ಆ ಸಿ.ಡಿ.ಕ್ಯಾಸೆಟ್‌ಅನ್ನು ತಾವು ಇವತ್ತು ನೋಡಬೇಕು. ಆ ಸಿ.ಡಿ.ಕ್ಯಾಸೆಟ್‌ಅನ್ನು ನೋಡಿಕೊಂಡು ಅಲ್ಲಿ ಭಾಷಣ ಮಾಡಿದ್ದನ್ನು ಅರ್ಥ ಮಾಡಿಕೊಂಡಾಗ, ಏಕತೆಯನ್ನು ಸೃಷ್ಟಿಸಿದ್ದೇವೋ ಅಥವಾ ಭಿನ್ನತೆಯನ್ನು ಸೃಷ್ಟಿಸಿದ್ದೇವೊ ಎಂದು ಅರ್ಥವಾಗುತ್ತದೆ. ಆ ಕ್ಯಾಸೆಟ್‌ಅನ್ನು ನೋಡಿದರೆ ಅರ್ಥವಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಒಂದು information ಬೇಕು ಅಷ್ಟೆ ಅಧ್ಯಕ್ಷರೆ, ಯಾವ ವಿಷಯವನ್ನು ಈಗ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ, ಕಾರ್ಡಿನ ಕೊನೆಯ ಪೇಜ್‌ನಲ್ಲಿ ರಾಜ್ಯ ಮತ್ತು ವಿಭಾಗ ಅಧಿಕಾರೇತರ ಸದಸ್ಯರ ಸಮಿತಿ ಎಂದು ಇದೆ. ಈ ಸಮಿತಿ ಸದಸ್ಯರ backgroundನಲ್ಲಿ ಏನು ಮಾನ್ಯ ಸಂಗಮೇಶ್ವರ ಪೂಜಾರ್, ರಾಜ್ಯ ಸಭೆ ಸದಸ್ಯರು, ಇವರು ಯಾರ್ಯಾರು ಎಂಬುದನ್ನು ಸಭೆಯ ಮುಂದೆ ಮಾಹಿತಿ ಕೊಟ್ಟರೆ ನಮಗೆ ಅನುಕೂಲ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಾದರ್ ಅವರು ಸಭೆಗೆ ತಪ್ಪು ಮಾಹಿತಿಯನ್ನು ಕೊಡಬಾರದು. ಈಗಾಗಲೇ ಈ ನಿಮಿತ್ತವಾಗಿ ಸರ್ಕಾರಿ ಆಜ್ಞೆ ಸಂಖ್ಯೆ: 102/ ಯುವ ಜನೋತ್ಸವ/ 2008-09 ಆಗಿದ್ದು ಅದರಲ್ಲಿ ಈ ಕಾರ್ಯಕ್ರಮದ ಉದ್ದೇಶ, ಯಾವ ಶೀರ್ಷಿಕೆಯಡಿ ಹಣ ಬಿಡುಗಡೆಯಾಗಬೇಕು, Joint Director ಮುಖಾಂತರ ಹಣ ಯಾವುದಕ್ಕೆ ಖರ್ಚಾಗಬೇಕು ಎನ್ನುವ ಸ್ಪಷ್ಟ ನಿದರ್ಶನಗಳು ಅದರಲ್ಲಿದೆ. ದೇಶಾದ್ಯಂತ, ಪ್ರಪಂಚದಾದ್ಯಂತ ಜಾಗೃತಿಯನ್ನು ಮೂಡಿಸಿರುವ ದೇಶದ ಹಿರಿಮೆಯನ್ನು ಗಳಿಸಿರುವಂತಹ ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12 ರಂದು ಸನ್ಮಾನ್ಯ ರಾಜೀವ್ ಗಾಂಧಿಯವರು ರಾಷ್ಟ್ರೀಯ ಯುವ ದಿನವೆಂದು ಘೋಷಿಸಿದೆ, ನಂತರ ಇವತ್ತು ದೇಶದ ಯುವಕರು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಗಳಲ್ಲಿ, ಕಾಲೇಜುಗಳಲ್ಲಿ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ನಮ್ಮ ಮುಖ್ಯಮಂತ್ರಿಯವರು ಜಾಗೃತಿ ಮೂಡಿಸುವ ಅವಶ್ಯಕತೆಯಿದೆ ಎಂದು ಹೇಳಿದ್ದಾರೆ. ಆ Cassetteನಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಪ್ರಾಥಮಿಕ ಶಿಕ್ಷಣ ಸಚಿವರು, ಉನ್ನತ ಶಿಕ್ಷಣ ಸಚಿವರು, ವೈದ್ಯಕೀಯ ಶಿಕ್ಷಣ ಸಚಿವರು, ಹೇಳಿರುವ ಸಂದೇಶಗಳಿವೆ ಮತ್ತು ದೇಶದಲ್ಲಿ ಎಲ್ಲೆಲ್ಲಿ ಭಯೋತ್ಪಾದನಾ ಚಟುವಟಿಕೆಗಳು ಆಗಿವೆ, ಅವುಗಳ ಕೆಲವು clippings ಇವೆ. ಮಾನ್ಯ ರಾಜೀವ್ ಗಾಂಧಿ ಅವರ ಹತ್ಯೆಗೆ ಸಂಬಂಧಿಸಿದಂತೆ, ಅವರು ಭಾಷಣ ಮಾಡುತ್ತಿದ್ದ ಸಂದರ್ಭದಲ್ಲಿ ಆತ್ಮಾಹುತಿ ಬಾಂಬ್‌ಗೆ ಬಲಿಯಾಗಿರುವ ವಿಚಾರ ಕೂಡ ಅದರಲ್ಲಿದೆ. ಹಾಗಾಗಿ ಒಬ್ಬ ಹಾಲು ಮಾರುವ ಮಹಿಳೆ, ಅನಕ್ಷರಸ್ಥ ಮಹಿಳೆ ರಾಜೀವ್ ಗಾಂಧಿ ಹತ್ಯೆಯ ವಿಚಾರವನ್ನು ಪೊಲೀಸರಿಗೆ ತಿಳಿಸುವುದಕ್ಕಾಗುತ್ತದೆ. ಶಿಕ್ಷಿತರಾದಂತಹ ವಿದ್ಯಾರ್ಥಿಗಳಾಗಿ ನೀವು ಪೊಲೀಸ್ ಇಲಾಖೆಗೆ ಸಹಾಯ

ಮಾಡುವುದಕ್ಕಾಗುವುದಿಲ್ಲವೇ? ಪೊಲೀಸ್ ಇಲಾಖೆಗೆ ಸಹಾಯ ಮಾಡುವ ಕೆಲಸವನ್ನು ವಿದ್ಯಾರ್ಥಿಗಳು ಮಾಡಬೇಕು. ಭಯೋತ್ಪಾದಕರಿಗೆ ಬೆಂಬಲಿಸಬಾರದು ಎಂದು ಅನೇಕ ಎಚ್ಚರಿಕೆಗಳನ್ನು ಅಲ್ಲಿ ಕೊಟ್ಟಿದ್ದೇವೆ. ಉದಾಹರಣೆಗೆ, ಯಾರಿಗೂ ನಿಮ್ಮ SIM cardನ್ನು ಮಾರಾಟ ಮಾಡಬೇಡಿ. ನಿಮ್ಮ ಮನೆ ಹಾಗೂ ರೂಮಿನ ಬಾಡಿಗೆ ಕೊಡುವಾಗ, ಹೆಚ್ಚಿನ ಬಾಡಿಗೆಗಳು ಬಂದ ಸಂದರ್ಭದಲ್ಲಿ ಬಾಡಿಗೆಯನ್ನು ಏಕೆ ತೆಗೆದುಕೊಳ್ಳುತ್ತಿದ್ದೀರಿ ಎನ್ನುವ ವಿಚಾರ ಮಾಡಿ. ಅಪರಿಚಿತರು ಹಾಸ್ಟೆಲ್‌ಗಳಲ್ಲಿ ವಾಸ ಮಾಡಲು ಬಂದರೆ ಅವರ ಬಗ್ಗೆ ತಕ್ಷಣ ಪೊಲೀಸರಿಗೆ ಮಾಹಿತಿ ಕೊಡಿ. ಈ ರೀತಿ ಅನೇಕ ಸಂಗತಿಗಳನ್ನು ಅದರಲ್ಲಿ ವಿವರಿಸಿದ್ದೇವೆ. ಆ ಮೂಲಕ ವಿದ್ಯಾರ್ಥಿಗಳನ್ನು ಎಚ್ಚರಿಸಲು, ದೇಶ ಭಕ್ತಿಯಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡಿದ್ದೇವೆ. ಏಕೆಂದರೆ, ಇತ್ತೀಚೆಗೆ ರಾಷ್ಟ್ರ ಗೀತೆಯನ್ನು ಹಾಡುವ ಸಂದರ್ಭದಲ್ಲಿ ಅನೇಕ ವಿದ್ಯಾರ್ಥಿಗಳು ಓಡಾಡುವ ಸಂದರ್ಭ ನಿರ್ಮಾಣವಾಗಿದೆ. ಆ ಹಿನ್ನೆಲೆಯೊಳಗೆ ರಾಷ್ಟ್ರ ಗೀತೆಗೆ ಎದ್ದು ನಿಲ್ಲಬೇಕೆನ್ನುವ slogan, saying ಕೂಡ cassette ನಲ್ಲಿದೆ. ರಾಷ್ಟ್ರ ಗೀತೆಗೆ ಗೌರವ ಸೂಚಿಸುವ ಸಲುವಾಗಿ ಎದ್ದುನಿಲ್ಲುವಂತಹ ಪ್ರೇರಣೆಯನ್ನು cassette ಮುಖಾಂತರ ಮಾಡುತ್ತಿದ್ದೇವೆ. ದಯವಿಟ್ಟು ಮಾನ್ಯ ಖಾದರ್ ಅವರು ಆ cassette ನ್ನು ನೋಡಬೇಕು. ಖಾದರ್ ಹಾಗೂ ನಾನು ಇಬ್ಬರೂ ಸೇರಿ ಆವತ್ತು ಮೆರವಣಿಗೆ ಪ್ರಾರಂಭವಾದಂತಹ ಸಂದರ್ಭದಲ್ಲಿ ರಾಷ್ಟ್ರ ಧ್ವಜವನ್ನು ಅಲ್ಲಿರುವಂತಹ NCC Cadet ಗೆ ಅರ್ಪಣೆ ಮಾಡಿದೆವು. ಮೆರವಣಿಗೆಯನ್ನು ಮಧ್ಯದಲ್ಲಿ ನಿಂತುಕೊಂಡು ನೋಡಿದೆ. ನಾನು ಹಾಗೂ ಸನ್ಮಾನ್ಯ ಖಾದರ್ ಅವರು, ಉಸ್ತುವಾರಿ ಸಚಿವರು, ಮಾನ್ಯ ಯೋಗೀಶ್ ಭಟ್ ಪೂರ್ತಿ ಮೆರವಣಿಗೆ ಕಾರ್ಯಕ್ರಮವನ್ನು ನೋಡಿದೆವು. ಇದೊಂದು ಒಳ್ಳೆಯ ಕಾರ್ಯಕ್ರಮ, ಶಹಬಾಸ್ ಎಂದು ಅಲ್ಲಿ ಹೇಳಿದ್ದ ಖಾದರ್ ಅವರು ಇಲ್ಲಿ ಸಭೆಗೆ ಬಂದ ನಂತರ ಏಕೆ ಉಲ್ಟಾ ಆಗಿದ್ದಾರೋ ನನಗೆ ಗೊತ್ತಿಲ್ಲ. ಇದರಲ್ಲಿ ಮಾನ್ಯ ಕುಮಾರಸ್ವಾಮಿ ಅವರು ಕೇಳಿದರು ಯಾವುದೇ ಒಂದು ಚಟುವಟಿಕೆ ಮಾಡಬೇಕಾದರೆ, ಸರ್ಕಾರದಿಂದ ಒಂದು ಸಮಿತಿಯಾಗಬೇಕು, ಸ್ವಾಭಾವಿಕವಾಗಿ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅನೇಕ ಸಮಿತಿಗಳನ್ನು ಮಾಡಿದ್ದಾರೆ. ಹಾಗಾಗಿ ಈ ಚಟುವಟಿಕೆಯನ್ನು ಮುಂದುವರೆಸುವುದಕ್ಕೋಸ್ಕರ Regional Commissioners, ಅಲ್ಲಿರತಕ್ಕ Deputy Commissioners, University Registrars, Joint Directors ಇವರೆಲಾ Nodal officers ಆಗಿರುತ್ತಾರೆ. ಇದಲ್ಲದೆ

ಸರ್ಕಾರೇತರ ಸಮಿತಿಯ ಸದಸ್ಯರಿದ್ದಾರೆ. ಇದು ಸಂಪೂರ್ಣವಾದಂತಹ ಸರ್ಕಾರಿ ಆಜ್ಞೆಯಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :- ಅವರು ಸುತ್ತಿ ಬಳಸಿ ಹೇಳುವುದರ ಬದಲು, ರಾಜ್ಯ ವಿಭಾಗ ಅಧಿಕಾರೇತರ ಸಮಿತಿ ಎಂದು ಹೇಳಿದ್ದಾರೆ. ಅದು ಬಿ.ಜೆ.ಪಿ ಕಾರ್ಯಕರ್ತರ ಸಮಿತಿ ಎಂದು ಹೇಳಲಿ.

ಶ್ರೀ ಅರವಿಂದ ಲಿಂಬಾವಳಿ :- ದಯವಿಟ್ಟು ನಾನು yield ಆಗಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಈ ದೇಶಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಯಾರಾದರೊಬ್ಬರು ಜೈಲಿಗೆ ಹೋಗಿದ್ದಾರೆಯೇ? ನಮ್ಮ ಕಾಂಗ್ರೆಸ್ ಪಕ್ಷದಿಂದ ಸ್ವಾತಂತ್ರ್ಯ ಬಂದಿದ್ದು.

(ಗೊಂದಲ)

ಶ್ರೀ.ಸಿ.ಟಿ. ರವಿ :- ಕಾಂಗ್ರೆಸ್‌ನವರು ಪಾಪದ ಕೆಲಸ ಮಾಡುತ್ತಾರೆ, ಆದುದರಿಂದ ವಿಸರ್ಜನೆ ಮಾಡಬೇಕೆಂದು ಮಹಾತ್ಮ ಗಾಂಧೀಜಿ ಅವರು ಹೇಳಿದರು.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಒಟ್ಟಿಗೆ ಮಾತನಾಡಬೇಡಿ.

ಶ್ರೀ ಬಸವರಾಜ ಬೊಮ್ಮಾಯಿ :- ಮಾನ್ಯ ಜಯಚಂದ್ರ ಅವರು ಮೊನ್ನೆಯಿಂದ ದೇಶಕ್ಕೆ ಸ್ವಾತಂತ್ರ್ಯ ತಂದಿದ್ದು ಕೇವಲ ಕಾಂಗ್ರೆಸ್ ಪಕ್ಷ ಮಾತ್ರ, ಬೇರೆ ಯಾರೂ ಅಲ್ಲವೆಂದು ಎಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಾಲ ಗಂಗಾಧರ ತಿಲಕ್, ಗೋಪಾಲ ಕೃಷ್ಣ ಗೋಖಲೆ, ಭಗತ್ ಸಿಂಗ್, ಚಂದ್ರಶೇಖರ್ ಅಜಾದ್ ಇವರುಗಳು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರೇ? ವೀರ ಸಾವರ್‌ಕರ್, ಸಾವಿರಾರು ಜನ ಅಮಾಯಕರು, ಸಾಮಾನ್ಯ ಜನ ಪ್ರಾಣವನ್ನು ಬಲಿ ಕೊಟ್ಟು, ರಕ್ತವನ್ನು ಕೊಟ್ಟು ದೇಶಕ್ಕೆ ಸ್ವಾತಂತ್ರ್ಯವನ್ನು ತಂದಿದ್ದಾರೆ. ಕೇವಲ ಕಾಂಗ್ರೆಸ್ ಪಕ್ಷ ಅಲ್ಲ. ಆದುದರಿಂದ, ನಾವು ದೇಶಕ್ಕೆ ಸ್ವಾತಂತ್ರ್ಯವನ್ನು ತಂದಿಸ್ದೇವೆ ಎನ್ನುವ ಹಮ್ಮಿನಿಂದ 60 ವರ್ಷ ದುರಾಡಳಿತ ಮಾಡಿದವರಿಗೆ ಈಗ ವಿಸರ್ಜನೆಯ ಕಾಲ ಬಂದಿದೆ ಎಂದು ಹೇಳುತ್ತೇನೆ. ಮಹಾತ್ಮಾಗಾಂಧೀಜಿಯವರು ಏನು ಹೇಳಿದ್ದರು ಅದನ್ನು ನೀವು ಇವತ್ತು ಕರ್ನಾಟಕದಲ್ಲಿ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ದೇಶದ ಸ್ವಾತಂತ್ರ್ಯಕ್ಕೆ ಶ್ರಮಿಸಿದವರೆಲ್ಲಾ ದೇಶಪ್ರೇಮಿಗಳು.

(ಗೊಂದಲ)

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ :- ನೀವು ಸುಭಾಷ್ ಚಂದ್ರ ಬೋಸ್ ಅವರನ್ನು ಕಾಂಗ್ರೆಸ್‌ನಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಅವರು Indian National Army ಯನ್ನು ಸ್ಥಾಪನೆ ಮಾಡಿದರು. ಅವರನ್ನು ಹೊರಗೆ ಹಾಕಿದಿರಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ :- ಕೇವಲ ರಾಜೀವ್ ಗಾಂಧಿ ಅವರ ಫೋಟೋವನ್ನು ಹಾಕುತ್ತೀರಿ. ಸುಭಾಷ್ ಚಂದ್ರ ಬೋಸ್, ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಫೋಟೋವನ್ನು ಹಾಕುತ್ತೀರಾ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ :- ಮಾನ್ಯ ಜಯಚಂದ್ರ ಅವರು ವಿಷಯಾಂತರ ಮಾಡಬಾರದು. ದಯವಿಟ್ಟು ವಿಷಯದ ಬಗ್ಗೆ ಚರ್ಚೆ ಮಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಸರ್ಕಾರಿ ಆದೇಶ ಮಾಡಿರುವ ಪ್ರತಿಯನ್ನು ದಯವಿಟ್ಟು ಕೊಡಿ. ಗೌಪ್ಯವಾಗಿ ಏಕೆ ಇಟ್ಟಿದ್ದೀರಿ? ಇಲ್ಲಿಯವರೆಗೆ ಏಕೆ ಪ್ರಚಾರಕ್ಕೆ ಬಂದಿಲ್ಲ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:- ಆದೇಶ ನಿಮಗೆ ಸಿಕ್ಕೇ ಸಿಗುತ್ತದೆ. ನೀವು ವಿರೋಧಪಕ್ಷದ ಉಪನಾಯಕರಾಗಿ ತೆಗೆದುಕೊಳ್ಳಬಹುದಾಗಿತ್ತಲ್ಲ?

ಶ್ರೀ ಟಿ.ಬಿ. ಜಯಚಂದ್ರ :- Government Order ಎಲ್ಲರಿಗೂ ಸಿಗಬೇಕು.

ಶ್ರೀ ಅರವಿಂದ ಲಿಂಬಾವಳಿ :- Government Order ಆಗುತ್ತಲೇ ಇರುತ್ತದೆ. ಸರ್ಕಾರಿ ಆಜ್ಞೆ ಇಲ್ಲದೆ ಬೇರೆ ಆಜ್ಞೆ ಮಾಡಲು ಸಾಧ್ಯವಿಲ್ಲ.

ಶ್ರೀ ಎಂ.ಪಿ. ರೇಣುಕಾಚಾರ್ಯ :- ನೋಡಿ ನೀವು ವಿಷಯಾಂತರ ಮಾಡಬೇಡಿ. ಅಫ್‌ಜಲ್ ಗುರುವನ್ನು ಗಲ್ಲಿಗೇರಿಸದೆ ಏಕೆ ಬಿಟ್ಟಿದ್ದೀರಿ?

(ಗೊಂದಲ)

ಅಧ್ಯಕ್ಷರು:- ಈ ವಿಷಯವನ್ನು close ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಯು.ಟಿ ಖಾದರ್ :- ಈ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ನಾವು ಅವರ ಜೊತೆ ಹೋಗಿದ್ದೂ ಹೌದು, ಮಾತನಾಡಿದ್ದು ಹೌದು, ಮೆಚ್ಚಿದ್ದು ಹೌದು. ಆದರೆ,. . . .

(ಗೊಂದಲ)

ಶ್ರೀ ಯು.ಟಿ. ಖಾದರ್ :- ಮಾನ್ಯ ಅಧ್ಯಕ್ಷರೆ, ನನ್ನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಮಾತನಾಡಲು ಅವಕಾಶ ಕೊಡಬೇಕು. ಆ ಕಾರ್ಯಕ್ರಮದಲ್ಲಿ ಮಾನ್ಯ ವಿ.ನಾಗರಾಜ್, ಸಮಾಜ ಸೇವಕ ಅವರು ಮಾತನಾಡಿದ ರೀತಿ, ಒಂದೇ ಧರ್ಮವನ್ನು ದೂರಿಕೊಂಡು ವಿದ್ಯಾರ್ಥಿಗಳ ಮಧ್ಯೆ ವೈಮನಸ್ಯದ ಪರಿಸ್ಥಿತಿಯನ್ನು ನಿರ್ಮಾಣವಾಯಿತು, ಆ ರೀತಿ ಆಗಬಾರದು, ಸಮಾಜದ ಎಲ್ಲಾ ವರ್ಗದವರನ್ನು ಸೇರಿಸಿಕೊಂಡು ಸಮಿತಿ ಮಾಡಬೇಕು. ಸಭೆ ನಡೆಸಿ.

ಶ್ರೀ ಅರವಿಂದ ಲಿಂಬಾವಳಿ :- ನಿಮ್ಮ ಲೀಡರ್ ಹೇಳಿಕೊಟ್ಟದ್ದು ಏನಾದರೂ ಬದಲಾವಣೆಯಾಗಿದ್ದರೆ, ಅದನ್ನು ಇಲ್ಲಿ ಒಪ್ಪಿಕೊಳ್ಳಿ. ಏಕೆಂದರೆ, ಆ ಕಾರ್ಯಕ್ರಮದಲ್ಲಿ ಭಾಗಿಯಾಗಿ, ... ಸಂತೋಷಪಟ್ಟ ಖಾದರ್‌ರವರು ಈ ಸದನಕ್ಕೆ ಬಂದ ನಂತರ ವ್ಯತ್ಯಾಸವಾಗುತ್ತಾರೆಂದರೆ, ರಾಜಕಾರಣ ಮಾಡುತ್ತಾರೆಂದರೋ, ಭಯೋತ್ಪಾದನೆಯನ್ನು ತಡೆಗಟ್ಟುವುದಕ್ಕೆ ..... ಸಹಕಾರ ಮಾಡುತ್ತಾರೋ?

ಶ್ರೀ ಯು.ಟಿ. ಖಾದರ್:- ಆ ಕಾರ್ಯಕ್ರಮದಲ್ಲಿ ಭಾಷಣ ಆಗುವ ಮುಂಚೆ ನಾನು ಭಾಗವಹಿಸಿದ್ದೆ. ಆ ಭಾಷಣ ಸರಿ ಇರಲಿಲ್ಲ. ಅದು ಏಕತಾ ಭಾಷಣವಾಗಿರಲಿಲ್ಲ. ಆ ಭಾಷಣವನ್ನು ನಿಷೇಧಿಸಬೇಕು.

ಅಧ್ಯಕ್ಷರು :- ಇಲ್ಲಿಗೆ ಈ ವಿಷಯವನ್ನು ಮುಕ್ತಾಯಗೊಳಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಮುಂದೆ ಚರ್ಚಿಸುವುದಕ್ಕೆ ನಾನು ಅವಕಾಶ ಕಲ್ಪಿಸಿಕೊಡುವುದಿಲ್ಲ. No more discussion.

4. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ)

(ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನೆ ಪ್ರಸ್ತಾವ

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಅಡಿಯಲ್ಲಿ ಈ ಹಿಂದೆ ಇದ್ದಂತೆ ದೇವದಾಸಿಯರ ಸಮರ್ಪಣಾ ಕಾರ್ಯಕ್ರಮ ಮತ್ತು ಅದರ ಪ್ರಚೋದನೆಗೆ ಇದ್ದಂತಹ ಒಂದು ಕಾನೂನು ಈಗ ವಿಶೇಷವಾಗಿ 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕದ ಅಡಿಯಲ್ಲಿ ತಂದು non-bailable offence ಆಗಿ ನಾವು ಪರಿವರ್ತಿಸಿದ್ದೇವೆ. ಇದರಿಂದಾಗಿ ಈ ಕಾನೂನಿನಡಿ ದೇವದಾಸಿಯರ ಸಮರ್ಪಣಾ ಪ್ರಚೋದನೆಗೆ ಮತ್ತು ಅದರ ಆಚರಣೆಗೆ ನೆರವಾಗುವ ಯಾವುದೇ ವ್ಯಕ್ತಿ ಇರಲಿ ಅಥವಾ ಯಾವುದೇ ಸಂಘಟನೆ ಇರಲಿ, ಅಂತಹವರಿಗೆ ಕನಿಷ್ಠ 2 ವರ್ಷಗಳ ಸಜೆ ಅಥವಾ ಶಿಕ್ಷೆ ಇದ್ದು, ಗರಿಷ್ಠ 3 ವರ್ಷಗಳ ತನಕ ಶಿಕ್ಷೆ ವಿಧಿಸಬಹುದಾಗಿದೆ. 2,000 ರೂ. ದಂಡದಿಂದ ಹಿಡಿದು 10,000 ರೂ.ಗಳವರೆಗೆ ದಂಡ ವಿಧಿಸುವ ಹೊಸ ವಿಧೇಯಕ ಇದಾಗಿದ್ದು, ಇದನ್ನು non-bailable offence ಆಗಿ ಮಾರ್ಪಡಿಸಲಾಗಿದೆ. ಸಭೆಯು ವಿಧೇಯಕವನ್ನು ಅನುಮೋದಿಸಬೇಕೆಂದು ಕೋರುತ್ತೇನೆ.